ಮತ್ತು ಕಾನೂನು ಸುವ್ಯವಸ್ಥೆ ದಿನೇ ದನೇ ಹಾಳಾಗುತ್ತಿದೆ, ಇಂತಹ ಪರಿಸ್ಥಿತಿ ಇವತ್ತೂ ಕೂಡ ಹುಬ್ಬಳ್ಳಿಯಲ್ಲಿದೆ. ಅದಕ್ಕೆ ನಾವು ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆಯವರ ಜೊತೆಯಲ್ಲಿ ಕಾ ್ ್ (ಐ)ಸದಸ್ಯರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಹೆಚ್.ಡಿ. ದೇವೇಗೌಡ : ನಾನು ಹೇಳುವುದನ್ನು ಕೇಳಿ ಸಭಾತ್ಯಾಗ ಮಾಡಿದ್ದರೆ ಬಹಳ ಒಳ್ಳೆಯದಿತ್ತು. ಮಾನ್ಯ ಮೊಯಿಲಿಯವರೇ ಮತ್ತು ಖರ್ಗೆಯವರೇ ನಾನು ಹೇಳುವ ಎರಡು ಮಾತುಗಳನ್ನು ಕೇಳಿ ಹೊರಗೆ ಹೋಗಿ. ಒಬ್ಬ ವ್ಯಕ್ತಿಯ ಹೆಸರು ತೆಗೆದು ಮಾತನಾಡಬಾರದೆಂದು ನಾನು ಬಹಳ ಹುಷಾರಾಗಿ ಮಾತನಾಡಿದೆ. ಯಾವ ಅನಿಲಕುಮಾರ್‌ರವರ ಹೆಸರನ್ನು ಅವರು ಹೇಳಿದ್ದಾರೊ ಅವನ ಮೇಲೆ ಗೂಂಡಾ ಆಕ್ಟ್‌ನ ಕೆಳಗೆ ಕೇಸ್ ಹಾಕಿ ಕ್ರಮ ತೆಗೆದುಕೊಳ್ಳಬೇಕೆಂದು ಅವರ ಸರ್ಕಾರವೇ ಆರ್ಡರ್ ಮಾಡಿದೆ, ನಾನಲ್ಲ ಆರ್ಡರ್ ಮಾಡಿದ್ದುದು.

Series of cases have been registered against tthe gentleman by the previous Government. ನಾನು ಒಂದು ಪಕ್ಷವನ್ನು ಅವಹೇಳನ ಮಾಡಬೇಕೆಂದು ಈ ಸಭೆಯಲ್ಲಿ ಮಾತನಾಡುವುದಕ್ಕೆ ಹೋಗಲಿಲ್ಲ. ಇಂತಹ ವಿಷಯವನ್ನು ಎತ್ತುವಾಗ ಸ್ವಲ್ಪಮಟ್ಟಿಗೆ ಎಚ್ಚರಿಕೆಯಿಂದ ಎತ್ತಿದರೆ ಬಹಳ ಚೆನ್ನಾಗಿರುತ್ತದೆ. ಬಹಳ ದಿವಸ ಅಧಿಕಾರದಲ್ಲಿರಬೇಕೆಂದು ನನಗೇನೂ ಆಸೆಯಲ್ಲ. ಇದನ್ನು ಮಿಸ್‌ಯೂಸ್ ಮಾಡಿ ಅದರಿಂದ ಏನೋ ಕಿರೀಟ ತೆಗೆದುಕೊಳ್ಳಬೇಕೆಂದೇನೂ ಇಲ್ಲ. Series of cases, ಸರ್ಕಾರಕ್ಕೆ ಅವಹೇಳನ ಮಾಡಬೇಕು. ಮೂರೂವರೆ ತಿಂಗಳಲ್ಲಿ ಈ ರಾಜ್ಯದಲ್ಲಿ ನಾಗರೀಕ ಸರ್ಕಾರ ಕೊಡುವುದಕ್ಕೆ ಯೋಗ್ಯತೆಯಿಲ್ಲವೆಂದರೆ ಜನ ನಂಬಬೇಕಲ್ಲ ಜನ ನಂಬಿದ್ದಾರೋ ಇಲ್ಲವೋ ಅದನ್ನು ಚರ್ಚೆ ಮಾಡೋಣ ಅದನ್ನೆಲ್ಲ ನಾನು ಹೇಳುವುದಕ್ಕೆ ಹೋಗುವುದಿಲ್ಲ. I do not want to take that issue now. The Director General of Police, Karnataka in March 1993 has ordered to take action against Sri Anil Kumar Patil under the Goonda Act. ನಾನು ಕೊನೆಯಲ್ಲಿ ಹೇಳಿದೆ. ಹಿಂದೆ ಏನೇನು ನಡೆದಿದೆ ಅದೆಲ್ಲ ನನ್ನ ಹತ್ತಿರ ಮಾಹಿತಿಯಿದೆ. ಡಕಾಯಿತಿ ಪ್ರಶ್ನೆ ಬಗ್ಗೆ ಸರ್ಕಾರ ಕೈಕಟ್ಟಿ ಕುಳಿತಿಲ್ಲ. ಏನಾಗಿದೆ ಎಂದು ಸಭೆಯಲ್ಲಿ ಪ್ರಪಂಚ ಹೇಳುವುದಕ್ಕೆ ಹೋಗಲಿಲ್ಲ. ಒಂದು ಶಬ್ದ ಹೇಳಿದೆ. We are not afraid of taking action even against any senior Officer. ಒಂದೊಂದು ಸಾರಿ ದೇವೇಗೌಡರು ಜೋರಾಗಿ ಮಾತನಾಡುತ್ತಾರೆಂದು ಮಾನ್ಯ ಪಾಟಾಳ್ ನಾಗರಾಜ್‌ರವರು ಹೇಳುತ್ತಾರೆ ಅದಕ್ಕೆ ನಾನು ಸ್ವಲ್ಪ ಮೃದುವಾಗಿಯೇ ಮಾತನಾಡುತ್ತೇನೆ.

ಆಂಧ್ರ ಮತ್ತು ಮಹಾರಾಷ್ಟ್ರ ಗಡಿಗಳಲ್ಲಿ ಹೊಂದಿಕೊಂಡಿರತಕ್ಕ ಜಿಲ್ಲೆಗಳಲ್ಲಿ ರಾತ್ರಿವೇಳೆ ಓಡಾಡುವ ಬಸ್ಸುಗಳಿಗೆ ಸಶಸ್ತ್ರ ಪೋಲೀಸರನ್ನು ಹಾಕಲಾಗಿದೆ. ಹೆದ್ದಾರಿಗಳಲ್ಲಿ 12 ಗಸ್ತಿನ ತಂಡಗಳನ್ನು ಮಾಡಿ, ಆ ತಂಡಗಳಿಗೆ 12 ವಾಹನಗಳನ್ನು ಕೊಟ್ಟು ರಾತ್ರಿವೇಳೆಯಲ್ಲಿ ಹೆದ್ದಾರಿಗಳಲ್ಲಿ ಗಸ್ತು ತಿರುಗುವ ವ್ಯವಸ್ಥೆಯನ್ನು ಮಾಡಿದ್ದೇವೆ. ಡಕಾಯಿತಿಗೆ ಸಂಬಂಧಪಟ್ಟ ಹಾಗೆ ಡಿಐಜಿಗಳ ಉಸ್ತುವಾರಿಯಲ್ಲಿ ಮೂರು ದಿನ ತಿರುಗಾಡಲು ವ್ಯವಸ್ಥೆ ಮಾಡಿದ್ದೇವೆ. The DIG of Police should work like a Captain of the whole team. ಅವರಿಗೆ ಈವೊಂದು ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಮೂರು ಜನ ಡಿಐಜಿಗಳನ್ನು ಹಾಕಿದ್ದೇವೆ. ಅವುಗಳನ್ನು ಬಲಪಡಿಸಲಾಗಿದೆ. ಗಡಿ ರಾಜ್ಯಗಳ ವರಿಷ್ಠಾಧಿಕಾರಿಗಳ ಜೊತೆಯಲ್ಲಿ ಸಂಪರ್ಕವನ್ನು ಇಟ್ಟು ಡಕಾಯಿತಿಗೆ ಸಂಬಂಧಪಟ್ಟ ಮಾಹಿತಿಗಳನ್ನು ವಿನಿಮಯ ಮಾಡಿಕೊಳ್ಳಲಾಗಿದೆ. ಡಕಾಯಿತಿ ಗ್ಯಾಂಗ್‌ಗಳು ಗಡಿ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರಗಳ ಕಡೆಯಿಂದ